ಅವರ ಸುತ್ತ ನಿಂತು ಕೋಟೆಯನ್ನೇ ಕಟ್ಟಿಬಿಟ್ಟರು!

ಆದರೆ ಕೆಲವೇ ಕ್ಷಣಗಳಲ್ಲಿ ಪೊಲೀಸರ ಲೆಕ್ಕಾಚಾರ ಬುಡಮೇಲಾಯಿತು. ಈ ಸಣ್ಣ ಊರಲ್ಲಿ ಜನ ಅತ್ಯಂತ ಶಿಸ್ತಿನಿಂದ ವರ್ತಿಸುತ್ತಾರೆಂಬ ಲೆಕ್ಕಾಚಾರ ಬುಡಮೇಲಾಗಿತ್ತು. ಮುಖ್ಯಮಂತ್ರಿಗೆ ಧಿಕ್ಕಾರ ಕೂಗುವ, ರಾಜೀನಾಮೆ ಕೊಟ್ಟು ತೊಲಗಿ ಎಂದು ಅಬ್ಬರಿಸುವ ಧ್ವನಿಗಳು ದೊಡ್ಡದಾದವು. ಅದೇ ಸಮಯದಲ್ಲಿ ಹೈಸ್ಕೂಲಿನ ಮುಂದೆ ಸ್ಫೋಟದ ಸದ್ದಾಯಿತು. ಯಾರೋ ಪಟಾಕಿ ಹಚ್ಚಿದ್ದರು. ಆದರೆ ಅದು ಬಾಂಬ್ ಇರಬಹುದೆಂದು ಕೆಲವರು ಶಂಕಿಸಿ ಗಾಬರಿಯಾದರಲ್ಲದೆ ಅತ್ತ ಓಡಿದರು. ಯಾರೊ ಬಾಂಬ್ ಎಸೆದರಂತೆ ಎಂದು ಕೆಲವರು ಹೇಳಿಕೊಂಡು ಓಡತೊಡಗಿದರು. ನೂಕು ನುಗ್ಗಲು ಹೆಚ್ಚಾಯಿತು. ಧಿಕ್ಕಾರ ಕೂಗುತ್ತ ಮುಖ್ಯಮಂತ್ರಿಯತ್ತ ನುಗ್ಗುತ್ತಿದ್ದವರನ್ನು ನಿಯಂತ್ರಿಸುವುದು ಪೊಲೀಸರಿಗೆ ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಅಲ್ಲೇ ಇದ್ದ ಎಸ್.ಪಿ. ಸಾಹೇಬರು ಪೊಲೀಸನೊಬ್ಬನ ಕೈಯಲ್ಲಿದ್ದ ಲಾಠಿ ಕಸಿದುಕೊಂಡು ಚಾರ್ಜ್ ಎಂದು ದೊಡ್ಡದಾಗಿ ಕೂಗುತ್ತ ಮುಖ್ಯಮಂತ್ರಿಯವರ ಕಡೆಗೆ ನುಗ್ಗುತ್ತಿದ್ದ ಜನರಿಗೆ ಹೊಡೆಯಲು ಮುಂದಾಗುತ್ತಿದ್ದಂತೆ ಇತರ ಪೊಲೀಸರು ಲಾಠಿ ಬೀಸತೊಡಗಿದರು.

ಕೆಲ ನಿಮಿಷಗಳ ಹಿಂದೆ ಪ್ರಶಾಂತವಾಗಿದ್ದ ಹೈಸ್ಕೂಲು ಮೈದಾನ ರಣರಂಗವಾಯಿತು. ಪೊಲೀಸರು, ಅಧಿಕಾರಿಗಳು ಮುಖ್ಯಮಂತ್ರಿಯವರನ್ನು ಹಿಂದಕ್ಕೆ ಕರೆದೊಯ್ದರು. ಮುಖ್ಯಮಂತ್ರಿ ಹೆಲಿಕಾಪ್ಟರ್ ಬಳಿ ಹೋಗಿ ನಿಂತು ನೋಡತೊಡಗಿದರು. ಅವರ ಸುತ್ತ ಪೊಲಿಸರು. ದೂರದಲ್ಲಿ ಊಟಕ್ಕಾಗಿ ಸಾಲಿನಲ್ಲಿ ನಿಂತವರು ಮುಖ್ಯಮಂತ್ರಿಗೆ ಏನೋ ಆಗಿರಬಹುದೆಂಬ ಕುತೂಹಲದಿಂದ ಮೈದಾನದ ಕಡೆಗೆ ಓಡಿ ಬರತೊಡಗಿದರು. ಹೈಸ್ಕೂಲು ಮುಂದಿನ ರಸ್ತೆಯಲ್ಲಿ ನಿಂತಿದ್ದ ಪೊಲೀಸ್ ವ್ಯಾನುಗಳೆಲ್ಲ ಮೈದಾನದೊಳಕ್ಕೆ ಬಂದವು. ಕಪ್ಪು ಬಾವುಟ ಬೀಸುತ್ತಿದ್ದವರನ್ನು ಪೊಲೀಸರು ಹಿಡಿದಿಡಿದು ವ್ಯಾನಿನೊಳಕ್ಕೆ ತುಂಬ ತೊಡಗಿದರು.

ಹದಿನೈದು ನಿಮಿಷಗಳಾದರೂ ಪರಿಸ್ಥಿತಿ ನಿಯಂತ್ರಣಕ್ಕೆ ಬರಲಿಲ್ಲ. ಪೊಲೀಸರು ಸಿಕ್ಕ ಸಿಕ್ಕವರನ್ನು ಮೈದಾನದ ತುಂಬೆಲ್ಲ ಅಟ್ಟಾಡಿಸಿಕೊಂಡು ಹೊಡೆಯುತ್ತಲೇ ಇದ್ದರು. ಅಷ್ಟರಲ್ಲಿ ವಲಯ ಡಿಐಜಿ, ಎಸ್.ಪಿ ಸಾಹೇಬರು ಮುಖ್ಯಮಂತ್ರಿ ಬಳಿ ಹೋಗಿ 'ಸಾರಿ ಸರ್... ಪರಿಸ್ಥಿತಿ ಕೆಟ್ಟದಾಗಿದೆ' ಎಂದು ಹೇಳಿ ಅವರ ಮುಖ ನೋಡಿದರು.

ನೋಡ ನೋಡುತ್ತಿದ್ದಂತೆ ಮುಖ್ಯಮಂತ್ರಿ ಹೆಲಿಕಾಪ್ಟರ್ ಹತ್ತಿ ಕೂತೇ ಬಿಟ್ಟರು. ಹೆಲಿಕಾಪ್ಟರ್ ರೆಕ್ಕೆಗಳು ನಿಧಾನವಾಗಿ ತಿರುಗಲು ಆರಂಭವಾಗುತ್ತಿದ್ದಂತೆ ದೂಳೆದ್ದಿತು. ದೂಳು ಏಳುತ್ತಲೇ ಹೋಯಿತು. ಹೆಲಿಕಾಪ್ಟರ್ ನಿಧಾನವಾಗಿ ನೆಲ ಬಿಟ್ಟು ಮೇಲಕ್ಕೆ ಹಾರತೊಡಗಿತು. ಜನರನ್ನು ಅಟ್ಟಿಸಿಕೊಂಡು ಹೊಡೆಯುತ್ತಿದ್ದ ಪೊಲೀಸರು, ಅವರಿಂದ ತಪ್ಪಿಸಿಕೊಳ್ಳಲು ಓಡುತ್ತಿದ್ದವರು ಒಂದು ಕ್ಷಣ ನಿಂತಲ್ಲೇ ನಿಂತುಬಿಟ್ಟರು!


## ಪ್ರೇಮಕುಮಾರ್ ಹರಿಯಬ್ಬೆ

ಹುಟ್ಟೂರು ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮ. ಈಗ ಬೆಂಗಳೂರಿನಲ್ಲಿ ವಾಸ. ವೃತ್ತಿಯಿಂದ ಪತ್ರಕರ್ತ. 'ಸತ್ತವರ ಬದುಕು', 'ದೇವ ಕಣಗಿಲೆ' ಸಂಕಲನದ ಕಥೆಗಳೂ ಸೇರಿದಂತೆ 40ಕ್ಕೂ ಹೆಚ್ಚು ಕತೆಗಳು 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳಲ್ಲಿ ಪ್ರಕಟವಾಗಿವೆ.